ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿ ನೀಡುವುದು

1541(1946); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಬಿಪಿಎಲ್ ಪಡಿತರ ಚೀಟಿದಾರರ ಹಾಗೂ ಪಡಿತರ ಅಂಗಡಿಗಳ ಸಂಖ್ಯೆ ಎಷ್ಟು; (ವಿಧಾನಸಭಾವಾರು ಸಂಪೂರ್ಣ ಮಾಹಿತಿ ನೀಡುವುದು)

ಆ) ರಾಯಭಾಗ ಮತ ಕ್ಷೇತ್ರದಾದ್ಯಂತ ಹೊಸ ಪಡಿತರ ಚೀಟಿಗಳ (ಎಪಿಎಲ್ ಹಾಗೂ ಬಿಪಿಎಲ್) ಬೇಡಿಕೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಸದರಿ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇ ಮಾಡಿ ಪಡಿತರ ಚೀಟಿಗಳನ್ನು ಯಾವಾಗ ವಿತರಿಸಲಾಗುವುದು;

ಈ) ಪ್ರಸ್ತುತ ಸಾಲಿನಲ್ಲಿ ರಾಯಭಾಗ ಮತ ಕ್ಷೇತ್ರದಲ್ಲಿ ಎಷ್ಟು ಎಪಿಎಲ್ ಹಾಗೂ ಬಿಪಿಎಲ್ ಚೀಟಗಳನ್ನು ವಿತರಣೆ ಮಾಡಲಾಗಿದೆ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ ಅಂತ್ಯೋದಯ ಪಡಿತರ ಚೀಟಿ ಸೇರಿದಂತೆ ಒಟ್ಟು 8,25,545 ಬಿಪಿಎಲ್ ಪಡಿತರ ಚೀಟಿಗಳು ಇರುತ್ತವೆ ಹಾಗೂ ಜಿಲ್ಲೆಯಲ್ಲಿ 1,707 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿರುತ್ತವೆ. (ವಿಧಾನಸಭಾವಾರು ಮಾಹಿತಿ ಲಗತ್ತಿಸಿದೆ).

ಆ) ರಾಯಭಾಗ ಮತ ಕ್ಷೇತ್ರದಲ್ಲಿ ಹೊಸದಾಗಿ 21,375 ಬಿಪಿಎಲ್ ಹಾಗೂ 563 ಎಪಿಎಲ್ ಪಡಿತರ ಚೀಟಿಗಾಗಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗಿದೆ.

ಇ) ಪಡಿತರ ಚೀಟಿ ವಿತರಣೆಗೆ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಪಡಿತರ ಚೀಟಿ ಕೋರಿ ಬಂದ ಅರ್ಜಿಗಳನ್ನು ತ್ವರಿತ ಗತಿಯಲ್ಲಿ ವಿಲೇ ಮಾಡಲು ನ್ಯಾಯಬೆಲೆ ಅಂಗಡಿ ಮಟ್ಟದ ಅಧಿಕಾರಿ (FLO) ಗಳಿಂದ ಪರಿಶೀಲನೆಗೆ ಒಳಪಡಿಸಿದ್ದು, ಅರ್ಜಿಗಳ ಸ್ಥಳ ತನಿಖೆ ಮಾಡಲಾಗುತ್ತಿದೆ. ತನಿಖಾ ವರದಿಯನ್ನಾಧರಿಸಿ ಆಹಾರ ನಿರೀಕ್ಷಕರು ವಿದ್ಯುತ್ ಆರ್.ಆರ್. ಸಂಖ್ಯೆ ಚುನಾವಣಾ ಗುರುತಿನ ಚೀಟಿ, ಆಧಾರ್ ಗುರುತಿನ ಚೀಟಿಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸಿ ನಂತರ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುತ್ತಿದೆ. ಫಲಾನುಭವಿಗಳ ಆಯ್ಕೆ ಹಾಗೂ ಪಡಿತರ ಚೀಟಿ ಮುದ್ರಣ ಎರಡನ್ನು ಅಂತಿಮಗೊಳಿಸುವ ಅಧಿಕಾರ ಆಹಾರ ನಿರೀಕ್ಷಕರಿಗೆ ನೀಡಲಾಗಿರುತ್ತದೆ.

ರಾಯಭಾಗ ತಾಲ್ಲೂಕಿನಲ್ಲಿ ಹೊಸ ಪಡಿತರ ಚೀಟಿಗಾಗಿ ಆನ್‌ಲೈನ್ ಮೂಲಕ 46,000 ಬಿಪಿಎಲ್ ಹಾಗೂ 1393 ಎಪಿಎಲ್ ಒಟ್ಟು 47,393 ಅರ್ಜಿಗಳು ಸ್ವೀಕರಿಸಲಾಗಿದೆ. ಈ ಪೈಕಿ 18,423 ಬಿಪಿಎಲ್ ಹಾಗೂ 166 ಎಪಿಎಲ್ ಒಟ್ಟು 18589 ಪಡಿತರ ಚೀಟಿಗಳನ್ನು ವಿತರಿಸಲಾಗಿದ್ದು, ಬಂದ ಅರ್ಜಿಗಳಲ್ಲಿ 1073 ಬಿಪಿಎಲ್ ಹಾಗೂ 114 ಎಪಿಎಲ್ ಒಟ್ಟು 1187 ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಹಾಗೂ 3620 ಬಿಪಿಎಲ್, 223 ಎಪಿಎಲ್ ಒಟ್ಟು 3843 ಪಡಿತರ ಚೀಟಿಗಳು ಸಿದ್ದವಾಗಿದ್ದು ವಿತರಣೆಯಾಗಬೇಕಾಗಿರುತ್ತದೆ. ಬಾಕಿ ಉಳಿದಿರುವ ಅರ್ಜಿಗಳಲ್ಲಿ 8,904 ಬಿಪಿಎಲ್, 223 ಎಪಿಎಲ್ ಪಡಿತರ ಚೀಟಿಗಳಲ್ಲಿ ಅರ್ಜಿದಾರರು ಎಪಿಕ್ ಹಾಗೂ ಯೂಐಡಿ ಸಂಖ್ಯೆಗಳನ್ನು ನೀಡಿರುತ್ತಾರೆ. ಸದರಿ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುವುದು.

ಈ) ಪ್ರಸ್ತುತ ಸಾಲಿನಲ್ಲಿ ರಾಯಭಾಗ ಮತಕ್ಷೇತ್ರದಲ್ಲಿ 11,986 ಬಿಪಿಎಲ್ ಹಾಗೂ 171 ಎಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ 2015 ನೇ ಸಾಲಿನ ಫೆಬ್ರುವರಿ 2015 ರ ಅಂತ್ಯಕ್ಕೆ ಪಾರ್ಶ್ವವಾಯುವಿನ ಪೀಡಿತರು ಪಡೆದಿರುವ ವಿವರ

(ವಿಧಾನಸಭೆಯ ಪ್ರಶ್ನೆ ಸಂಖ್ಯೆ 1946 ಕ್ಕೆ ಸಂಬಂಧಿಸಿದಂತೆ)(ವಿಧಾನ ಸಭೆಯ ಮಾಹಿತಿಗಾಗಿ)

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ತಾಲ್ಲೂಕುಗಳ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಸ್ಥಾಪಿಸಲಾಗಿರುವ ಸಂಖ್ಯೆ	ಫೆಬ್ರುವರಿ 2015 ರ ಅಂತ್ಯಕ್ಕೆ ಪಡೆದುಕೊಂಡಿರುವ ಪೀಡಿತರ ವಿವರ			
				ಅಂತ್ಯೋದಯ	ಬಿಪಿಎಲ್	ಎಪಿಎಲ್	ಒಟ್ಟು
1	2	3	4	5	6	7	9
1	ಬೆಳಗಾವಿ	ಬೆಳಗಾವಿ(ಉತ್ತರ)	94	771	24701	12378	37850
		ಬೆಳಗಾವಿ (ದಕ್ಷಿಣ)	96	921	25818	18580	45319
		ಬೆಳಗಾವಿ (ಗ್ರಾಮೀಣ)	105	3522	39402	33199	76123
2	ಖಾನಾಪುರ	ಖಾನಾಪುರ	135	4962	44215	22432	71609
3	ಮುಧೋಳ	ಮುಧೋಳ	85	3433	33935	12379	49747
		ಯಮಕನಮರ್ಡಿ	99	5313	46146	22236	73695
4	ಬೈಲಹೊಂಗಲ	ಬೈಲಹೊಂಗಲ	86	3838	39780	12637	56255
		ಕಿತ್ತೂರು	93	4336	43110	17695	65141

5	ಸವದತ್ತಿ	ಸವದತ್ತಿ-ಯಲ್ಲಮ್ಮ	85	4244	42753	13631	606128
6	ರಾಮದುರ್ಗ	ರಾಮದುರ್ಗ	132	5015	44762	14829	646066
7	ಗೋಕಾಕ	ಗೋಕಾಕ	102	3601	50639	12947	670873
		ಅರಭಾವಿ	97	4234	51808	14021	700463
8	ಬೆಳ್ಳಿಡಿ	ಬೆಳ್ಳಿಡಿ - ಸವದತ್ತಿ	82	2685	50723	14930	683338
		ಸಿಪ್ಪಿಗೆ	99	3009	49177	18984	711801
9	ರಾಯಬಾಗ	ರಾಯಬಾಗ	94	4064	44218	10219	585011
		ಕುಡಚಿ	78	3338	33402	14743	514833
10	ಅಥಣಿ	ಅಥಣಿ	81	4719	48321	15500	685401
		ಜಮಖಂಡಿ	64	4831	45799	17353	679831
		ಒಟ್ಟು	1707	66836	758709	298603	11241481